ಶ್ರೀ ಎಸ್. ಆರ್. ಬೊಮ್ಮಾಯಿ.—ಈ ವಿಷಯವನ್ನು ಇನ್ನು ಒಂದು ಅಥವಾ ಎರಡು ತಿಂಗಳೊಳಗೆ ಮಂತ್ರಿಮಂಡಲದ ಮುಂದೆ ತೆಗೆದುಕೊಂಡು ಹೋಗುತ್ತೇನೆ.

ಶ್ರೀ ವಿಶ್ವನಾಥ್‌ರೆಡ್ಡಿ ವಂದ್ಲಾಳ್.—ಬಾಗಲಕೋಟೆಯನ್ನು ಜಿಲ್ಲಾ ಕೇಂದ್ರವಾಗಿ ಮಾಡಲಾಗಿದೆಯೆಂದು ಒಂದು ಪತ್ರಿಕೆಯಲ್ಲಿ ವರದಿಯಾಗಿದೆ. ಅದು ನಿಜವೇ ಹೇಗೆ ? ಬಾಗಲಕೋಟೆಯನ್ನು ಜಿಲ್ಲಾ ಕೇಂದ್ರವಾಗಿ ಮಾಡಿದ್ದಲ್ಲಿ, ವರದಿಯ ಪ್ರಕಾರ ಇತರ ಜಿಲ್ಲೆಗಳನ್ನು ಮಾಡದೇ ಬಿಟ್ಟು ಅದನ್ನು ಮಾತ್ರ ಏಕೆ ಮಾಡಿದಿರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ವಿಷಯವನ್ನು ಇನ್ನೂ ಮಂತ್ರಿಮಂಡಲದ ಮುಂದೆಯೇ ತೆಗೆದುಕೊಂಡಿಲ್ಲ. ಪತ್ರಿಕೆಯಲ್ಲಿ ಆ ರೀತಿ ವರದಿ ಬಂದಿದ್ದರೆ ಅದು ಸರಿಯಾದ ವರದಿಯಲ್ಲ. ಜಿಲ್ಲೆಗಳನ್ನು ಮಾಡುವಾಗ ಸಮಗ್ರವಾಗಿ ನಿರ್ಣಯ ತೆಗೆದುಕೊಳ್ಳಿತ್ತೇವೆ.

ಅಧ್ಯಕ್ಷರು.—ಶ್ರೀ ವಿ. ಎಂ. ಹಿಂಡಸಗೇರಿ (ಮಾನ್ಯ ಸದಸ್ಯರು ಸದನದಲ್ಲಿ ಹಾಜರಿರಲಿಲ್ಲ.)

ಶ್ರೀ ಟಿ. ಎಸ್. ಮಣಿ.—(ಮಾನ್ಯ ಸದಸ್ಯರು ಸದನದಲ್ಲಿ ಹಾಜರಿರಲಿಲ್ಲ.)

ಶ್ರೀ ಬಿ. ಎಸ್. ಯಡಿಯೂರಪ್ಪ.—(ಮಾನ್ಯ ಸದಸ್ಯರು ಸದನದಲ್ಲಿ ಹಾಜರಿರಲಿಲ್ಲ.)

ಶ್ರೀ ಡಿ. ಟಿ. ಜಯಕುಮಾರ್.— (ಮಾನ್ಯ ಸದಸ್ಯರು ಸದನದಲ್ಲಿ ಹಾಜರಿರಲಿಲ್ಲ.) ಶ್ರೀ ಜಿ. ರಾಜುಗೌಡರವರು.

ಚುಕ್ಕೆ ಪ್ರಶ್ನೆ ಸಂಖ್ಯೆ ೪೨೫ (೧೩೮೭)

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆಗೆ ಉತ್ತರ ಕೊಡಲು ಸಮಯಬೇಕು. ಎಲ್ಲಾ ಜಿಲ್ಲೆಯ ಮಾಹಿತಿ ಕೇಳಿರುವುದರಿಂದ, ಜಿಲ್ಲಾ ಕೇಂದ್ರಗಳಿಂದ ಇನ್ನೂ ಮಾಹಿತಿ ಬಂದಿಲ್ಲ.

ಶ್ರೀ ಜಿ. ರಾಜುಗೌಡ.—ರಾಜ್ಯದ ಪ್ರತಿ ಜಿಲ್ಲೆಯಲ್ಲಿ ಎಷ್ಟೆಷ್ಟು ಎಕರೆ ಸಿ. ಮತ್ತು ಡಿ. ವರ್ಗದ ಭೂಮಿಯನ್ನು ಕಂದಾಯ ಇಲಾಖೆಯವರು ಅರಣ್ಯ ಇಲಾಖೆಗೆ ವರ್ಗ ಮಾಡಿದ್ದಾರೆ ಎಂಬುದೆನ್ನು ಹೇಳುವುದಕ್ಕೆ ಇಷ್ಟು ಸಮಯಬೇಕೇ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಜಿಲ್ಲಾ ಕೇಂದ್ರಗಳಿಂದ ಇನ್ನೂ ಮಾಹಿತಿ ಬಂದಿಲ್ಲ. ಮಾಹಿತಿ ಬಂದಮೇಲೆ ಉತ್ತರವನ್ನು ಕೊಡುತ್ತೇನೆ.

ಅಧ್ಯಕ್ಷರು.—ಶ್ರೀ ಕೆ. ಹೆಚ್. ಪಾಟೀಲ್ (ಮಾನ್ಯ ಸದಸ್ಯರು ಸದನದಲ್ಲಿ ಹಾಜರಿರಲಿಲ್ಲ.) ಶ್ರೀ ಜಿ. ಎಸ್. ಆಚಾರ್‌ರವರು.

ಜಿಲ್ಲೆಗಳ ಹಾಗೂ ತಾಲ್ಲೂಕುಗಳ ಪುನರ್ ವಿಂಗಡಣೆ.

೧೩೪೧. ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಕಂದಾಯ, ಯೋಜನೆ ಹಾಗೂ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹೊಸ ಜಿಲ್ಲೆ ಮತ್ತು ತಾಲ್ಲೂಕುಗಳ ರಚನೆಗಾಗಿ ಸಲಹೆ ಮಾಡಲು ರಚಿಸಲಾದ ಸಮಿತಿ ಈಗಾಗಲೇ ವರದಿ ಸಲ್ಲಿಸಿದ್ದರೂ ಸೂಕ್ತ ಕ್ರಮ ಕೈಗೊಳ್ಳದಿರಲು ಕಾರಣವೇನು ?

ಆ) ದಕ್ಷಿಣ ಕನ್ನಡ ಜಿಲ್ಲೆಯನ್ನು ವಿಭಜಿಸಲು ಹಾಗೂ ಅಲ್ಲಿ ಹೊಸ ತಾಲ್ಲೂಕುಗಳನ್ನು ರಚಿಸಲು ನೀಡಿರುವ ಸಲಹೆಗಳಾವುವು ?

ಇ) ಸದರಿ ವರದಿಯನ್ನು ಅನುಷ್ಠಾನಕ್ಕೆ ತರುವುದೆಂದು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕೇಂದ್ರಾಯ ಯೋಜನೆ ಹಾಗೂ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು).—

ಅ) ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.

ಆ) ಸಮಿತಿಯು ದಕ್ಷಿಣ ಕನ್ನಡವನ್ನು ಎರಡು ಜಿಲ್ಲೆಗಳಾಗಿ ವಿಭಜಿಸಲು ಸಲಹೆ ಮಾಡಿದೆ. ಅವುಗಳೆಂದರೆ ದಕ್ಷಿಣ ಕನ್ನಡ ಮತ್ತು ಉಡುಪಿ. ಹಾಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಕೆಳಕಂಡ ತಾಲ್ಲೂಕುಗಳಿವೆ.

೧ ಬಂಟ್ವಾಳ	೫ ಮಂಗಳೂರು
೨ ಬೆಳ್ತಂಗಡಿ	೬ ಪುತ್ತೂರು
೩ ಕುಂದಾಪುರ	೭ ಸೂಳ್ಯ
೪ ಕಾರ್ಕಳ	೮ ಉಡುಪಿ

ಜಿಲ್ಲಾ ಪ್ಲಾನರ್ ವಿಂಗಡಣಾ ಸಮಿತಿಯು ಮೇಲೆ ತಿಳಿಸಿದ ತಾಲ್ಲೂಕುಗಳ ಜೊತಗೆ ಈ ಕೆಳಕಂಡ ಹೊಸ ತಾಲ್ಲೂಕುಗಳನ್ನು ರಚಿಸಲು ಸಲಹೆ ಮಾಡಿದೆ.

೧ ಮುಲ್ಕಿ	೪ ಬ್ರಹ್ಮಾವರ
೨ ಕಡಬ	೫ ಮೂಡಬಿದ್ರಿ
೩ ಬೈಂದೂರು	

ಸಮಿತಿಯ ಶಿಫಾರಸ್ಸಿನಲ್ಲಿರುವಂತೆ ಈ ಎರಡೂ ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರುವ ತಾಲ್ಲೂಕುಗಳು ಈ ರೀತಿ ಇವೆ.

ದಕ್ಷಿಣ ಕನ್ನಡ ಜಿಲ್ಲೆ	ಉಡುಪಿ ಜಿಲ್ಲೆ
೧ ಬಂಟ್ವಾಳ	೧ ಬೈಂದೂರು
೨ ಬೆಳ್ತಂಗಡಿ	೨ ಬ್ರಹ್ಮಾವರ
೩ ಮಂಗಳೂರು	೩ ಕಾರ್ಕಳ
೪ ಮಂಲ್ಕಿ	೪ ಕುಂದಾಪುರ
೫ ಪುತ್ತೂರು	೫ ಮೂಡಬಿದ್ರಿ
೬ ಸೂಳ್ಯ	೬ ಉಡುಪಿ
೭ ಕಡಬ	

೨) ವರದಿಯು ಸರ್ಕಾರದ ಪರಿಶೀಲನೆಯಲ್ಲಿದ್ದು ಸೂಕ್ತ ಕಾಲದಲ್ಲಿ ವರದಿಯ ಶಿಫಾರಸ್ಸುಗಳ ಬಗ್ಗೆ ನಿರ್ಧಾರ ಕೈಗೊಳ್ಳಲಾಗುವುದು.

ಮಾನ್ಯ ಅಧ್ಯಕ್ಷರೇ, ಇದೇ ತರಹದ ಇನ್ನೊಂದು ಪ್ರಶ್ನೆಗೆ ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಮಾನ್ಯ ಸದಸ್ಯರು ದಕ್ಷಿಣ ಕನ್ನಡ ಜಿಲ್ಲೆಯ ಬಗ್ಗೆ ಸ್ಪೆಸಿಫಿಕ್ ಆಗಿ ಕೇಳಿದ್ದಾರೆ. ಇದು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಜಿ. ಎಸ್. ಆಚಾರ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಪ್ರತಾಪಚಂದ್ರಶೆಟ್ಟಿ ಯವರ ಪ್ರಶ್ನೆಗೆ ಉತ್ತರವಾಗಿ ಮತ್ತು ಮಾನ್ಯ ಸದಸ್ಯರಾದ ಶ್ರೀ ಬಸವಲಿಂಗಪ್ಪನವರ ಪೂರಕ ಪ್ರಶ್ನೆಗೆ ಉತ್ತರವಾಗಿ ಮಾನ್ಯ ಸಚಿವರು ಇನ್ನು ಒಂದು ಅಥವಾ ಎರಡು ತಿಂಗಳೊಳಗೆ ಈ ವಿಷಯವನ್ನು ಮಂತ್ರಿಮಂಡಲದ ಮುಂದೆ ತರಲಾಗುತ್ತದೆಂದು ಉತ್ತರ ಕೊಟ್ಟಿದ್ದಾರೆ. ಮಾನ್ಯ ಅಧ್ಯಕ್ಷರೇ, ಇದು ಅನೇಕ ವರ್ಷಗಳಿಂದ ನೆನೆಗುದಿಗೆ ಬಿದ್ದಿರತಕ್ಕಂಥ ಸಮಸ್ಯೆ. ತಾಲ್ಲೂಕುಗಳನ್ನು ಹೆಚ್ಚು ಮಾಡಿದರೆ ಕೇಂದ್ರ ಸರ್ಕಾರದಿಂದ ಹೆಚ್ಚು ಹಣ ಬರುತ್ತದೆಂದು ಎಲ್ಲರಿಗೂ ಗೊತ್ತಿದೆ. ಆದರೂ ಇನ್ನೂ ಅದರ

ಬಗ್ಗೆ ಯಾವ ನಿರ್ಣಯವನ್ನು ಇವರು ತೆಗೆದುಕೊಂಡಿಲ್ಲ. ಇದರ ಬಗ್ಗೆ ಸರ್ಕಾರ ನಿರ್ಣಯ ತೆಗೆದು ಕೊಳ್ಳುವುದಕ್ಕೆ ಆಗದಿದ್ದರೆ, ನಿರ್ಣಯ ತೆಗೆದುಕೊಳ್ಳುವುದಿಲ್ಲವೆಂದು ಹೇಳಿಬಿಡಿ, ಸುಮ್ಮನೆ ಈ ನಾಟಕ ಬೇಡ. ಯಾವ ರೀತಿಯಲ್ಲಿ ಬ್ಯಾಕ್‌ವರ್ಡ್‌ಕ್ಲಾಸ್ ಕಮೀಶನ್ ಮಾಡುವಂಥಾದ್ದು, ಅವರಿಂದ ರಿಪೋರ್ಟ್ ತೆಗೆದುಕೊಳ್ಳುವಂಥಾದ್ದು, ಎಲ್ಲವನ್ನೂ ನೆನೆಗುದಿಯಲ್ಲಿ ಇಡುವಂಥಾದ್ದು, ಹೀಗೆ ಹೊಸ ಕಮೀಶನ್‌ಗಳು, ಹೊಸ ರಿಪೋರ್ಟ್‌ಗಳು ಎಂದೆಲ್ಲಾ ಮಾಡುವಂತಹ ನಾಟಕ ಬೇಡ. ಯಾವುದಾದರೂ ಒಂದು ನಿರ್ಣಯವನ್ನು ಈ ಬಗ್ಗೆ ತೆಗೆದುಕೊಳ್ಳುತ್ತೀರಾ?

ಶ್ರೀ ಎಸ್. ಆರ್. ಬೊಮ್ಮಾಯಿ.—ಈಗ ಸಂಬಂಧಪಟ್ಟ ವರದಿ ಬಂದು ಮೂರು ತಿಂಗಳು ಆಗಿದೆ. ಆ ಬಗ್ಗೆ ನಿರ್ಣಯವನ್ನು ಆದಷ್ಟು ಜಾಗ್ರತೆ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ಇದರಲ್ಲಿ ಒಂದು ಅಡ್ವಾಂಟೇಜ್ ಇದೆ ಅನೇಕ ಗ್ರಾಮಗಳು ಇರತಕ್ಕ ಭಾಗಗಳು ಇವೆ. ತಮಗೆ ಗೊತ್ತಿರುವ ಹಾಗೆ ಬಿಜಾಪುರ, ಗುಲ್ಬರ್ಗ, they are territorially biggest districts. ಅವುಗಳನ್ನು ಈ ಕಡೆಗೆ ಹೋಲಿಸಿದರೆ, ಅಂತಹ ಭಾಗಗಳು ಮೂರು ಸೇರಿಸಿದರೆ ಒಂದೊಂದು ಜಿಲ್ಲೆಯಾಗುತ್ತದೆ. ವಿಸ್ತೀರ್ಣದಲ್ಲಿ ಅವುಗಳು ತುಂಬಾ ವಿಶಾಲವಾಗಿವೆ. ಇಲ್ಲಿನ ಹಾಸನ, ಚಿಕ್ಕಮಂಗಳೂರು, ಮಂಡ್ಯ, ಮುಂತಾದ ಜಿಲ್ಲೆಗಳನ್ನು ಅವುಗಳೊಂದಿಗೆ ಹೋಲಿಕೆ ಮಾಡಿದರೆ ವ್ಯತ್ಯಾಸ ಗೊತ್ತಾಗುತ್ತದೆ. ಹೀಗೆ ಇರುವುದರಿಂದ ಅಲ್ಲಿಯ ಡೆವಲಪ್‌ಮೆಂಟ್‌ಗೆ ಹೊಡೆತ ಬೀಳುತ್ತದೆ. ಉದಾಹರಣೆಗೆ ಒಂದು ರಸ್ತೆಯ ವಿಚಾರವನ್ನು ತೆಗೆದುಕೊಳ್ಳಿ. ಒಂದು ತಾಲ್ಲೂಕಿನಲ್ಲಿ 200 ಕಿ.ಮೀ. ಉದ್ದದ ರಸ್ತೆಯನ್ನು ತೆಗೆದುಕೊಳ್ಳಬೇಕಾಗುತ್ತದೆ, ಒಂದೊಂದು ೧೬೦–೨೦ ಕಿ.ಮೀ. ಉದ್ದ ಇರತಕ್ಕಂಥ ತಾಲ್ಲೂಕುಗಳು ಇವೆ. ಆ ದೃಷ್ಟಿಯಿಂದಲಾದರೂ ರೀಆರ್ಗನೈಸ್ ಮಾಡತಕ್ಕಂಥದ್ದು ಅವಶ್ಯಕ. ಅದರಂತೆ ಆಡಳಿತದ ಅನುಕೂಲತೆಗಳು ಕೂಡ ಇದರಿಂದಾಗಿ ಆಗುತ್ತದೆ. ಜನರಿಗೆ ಇರುವ ಗೋಳನ್ನು ಕೂಡ ಪರಿಹಾರ ಮಾಡಿದ ಹಾಗೆ ಆಗುತ್ತದೆ ಅದಕ್ಕಾಗಿ ಮಾನ್ಯ ಆಚಾರ್ಯರವರು ಈ ವಿಚಾರವನ್ನು ಪ್ರಸ್ತಾಪ ಮಾಡಿರಬೇಕು. District bifurcation ಮಾಡಬೇಕೆಂದು ಪ್ರಪೋಸಲ್ಸ್ ಇವೆ. ದೊಡ್ಡ ದೊಡ್ಡ ಜಿಲ್ಲೆಯನ್ನು ವಿಭಜನೆ ಮಾಡಿದರೆ ಹೊಸ ಜಿಲ್ಲೆಗಳಿಗೆ ಫಂಡ್ಸ್ ಕೂಡ ಬ್ಲಾಕ್ ಮಟ್ಟದಲ್ಲಿ ಸಿಕ್ಕುತ್ತದೆ. ಆ ದೃಷ್ಟಿಯಿಂದಲಾದರೂ ಮಾಡಬೇಕಾಗುತ್ತದೆ. ಇದರಿಂದ ಜಿಲ್ಲೆಯ ಡೆವಲಪ್‌ಮೆಂಟ್ ಆಗುವುದಕ್ಕೆ ಅವಕಾಶವಾಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಉಪನಾಯಕರು ಹೇಳಿದ್ದನ್ನು ನಾನು ಒಪ್ಪಿ ಕೊಳ್ಳುತ್ತೇನೆ. ಆ ಬಗ್ಗೆ ಸರಕಾರದ ಮನಸ್ಸು ಕೂಡ ಇದೆ. ಮತ್ತು ಈ ಬಗ್ಗೆ ನಿರ್ಣಯವನ್ನು ಆರ್ಥಿಕ ಅನುಕೂಲತೆಗಳನ್ನು ನೋಡಿಕೊಂಡು ಹಂತ ಹಂತವಾಗಿ ಮಾಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ಈಗ ಮಾಡುತ್ತಿರುವ ಕಲಾಕೌಶಲ್ಯ, ಪುಸ್ತಕಗಳ ಪ್ರಕಟಣೆ, ಪಬ್ಲಿಸಿಟಿ, ಮುಂತಾದವುಗಳನ್ನು ನಿಲ್ಲಿಸಿ, ಈ ಕಡೆಗೆ ಸ್ವಲ್ಪ ಹೆಚ್ಚು ಗಮನ ಕೊಡಿ.....

ಶ್ರೀ ಎಸ್. ಆರ್. ಬೊಮ್ಮಾಯಿ.—ಸರಕಾರದ ಇಚ್ಛೆ ಕೂಡಾ ಇದನ್ನು ಬೇಗನೆ ಮಾಡಬೇಕೆಂದು ಇದೆ. ಅಭಿವೃದ್ಧಿಯ ದೃಷ್ಟಿಯಿಂದ ಬೇಗ ಮಾಡಬೇಕಾಗಿದೆ. ಮೊದಲು ತಾಲ್ಲೂಕುವಾರು ಹಣ ಬರುತ್ತಾ ಇತ್ತು, ಜನಸಂಖ್ಯೆಯ ಆಧಾರದ ಮೇಲೆ ಈಗ ಫಂಡ್ಸ್ ಬರುತ್ತಾ ಇದೆ. ಐ.ಆರ್.ಡಿ.ಪಿ, ಎನ್.ಆರ್.ಇ.ಪಿ, ಮುಂತಾದವುಗಳ ವಿಚಾರದಲ್ಲಿಯೂ ಕೂಡ ಬೇಸಿಕ್ ಜನಸಂಖ್ಯೆಯ ಆಧಾರದ ಮೇಲೆ ಇದೆ ಉದಾಹರಣೆಗೆ ಹೇಳುವುದಾದರೆ, ಚಿಕ್ಕೋಡಿಯಲ್ಲಿ ಮೂರು ಅಸೆಂಬ್ಲಿ ಕ್ಷೇತ್ರಗಳು ಇವೆ ಈಗ ೬೦೦ ಜನರಿಗೆ ಐಆರ್‌ಡಿಪಿ ಯಲ್ಲಿ ಒಂದು ತಾಲ್ಲೂಕು ಎಂದು ಮಾಡಿದರೆ ಒಂದು ಕ್ಷೇತ್ರಕ್ಕೆ ೨೦೦ ಜನರೂ ಕೂಡ ಬೆನಿಫಿಶಿಯರ್ಸ್ ಬರುತ್ತಾ ಇರಲಿಲ್ಲ: ಇದನ್ನೆಲ್ಲಾ ನೋಡಿ ಒಂದು ನಿರ್ಣಯವನ್ನು ಈ ಬಗ್ಗೆ ಆದಷ್ಟು ಬೇಗ ತೆಗೆದುಕೊಳ್ಳುತ್ತೇವೆ. ಅಭಿವೃದ್ಧಿ ಕಾರ್ಯಗಳಿಗಾಗಿ ಹಣಕಾಸಿನ ಅವಶ್ಯಕತೆಯೂ ಇದೆ. ಇದನ್ನು ಕೂಡ ಗಂಭೀರವಾಗಿ ಸರಕಾರ ವಿಚಾರ ಮಾಡುತ್ತದೆ. ಲೇನ್ ಪ್ಲಾನಿಂಗ್ ಕಮಿಶನ್ ಮುಂದೆಯೂ ಕೂಡ ಈ ಬೇಡಿಕೆಯನ್ನು ಇಡತಕ್ಕಂಥ ಬಗ್ಗೆ ನಾವು ಕ್ರಮ ತೆಗೆದು ಕೊಂಡಿದ್ದೇವೆ.

ಶ್ರೀ ಬಿ. ಎಂ. ಇದಿನಬ್ಬ.—ಅಧ್ಯಕ್ಷರೆ, ಈ ತನಕವೂ ಅನೇಕ ಸಮಿತಿಗಳು, ವರದಿಗಳು ಬಂದು ಹೋಗಿ ಸ್ಥಬ್ದವಾಗಿವೆ. ಹಾಗೆಯೇ ಈ ಸಮಿತಿಯೂ ಕೂಡ ಆರ್ಥಿಕ ಸಮಸ್ಯೆಗಳು ಇತ್ಯಾದಿಗಳನ್ನು ಎದುರಿಸಿ ಸ್ಥಬ್ದವಾಗುತ್ತದೆಯೇ ಹೇಗೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮೂರು ತಿಂಗಳಲ್ಲಿ ಮಂತ್ರಿ ಮಂಡಳದ ನಿರ್ಣಯಕ್ಕೆ ಹೋಗಿದೆ. ಆದಷ್ಟು ಬೇಗ ಒಂದು ನಿರ್ಣಯವನ್ನು ತೆಗೆದುಕೊಳ್ಳುತ್ತೇವೆ. ಒಂದೇ ಸಲ ಎಲ್ಲಾ ಜಿಲ್ಲೆಗಳನ್ನು ಮಾಡಿದ್ದರೂ ತಮಿಳು ನಾಡಿನಲ್ಲಿ ಹೇಗೆ ಹಂತಹಂತವಾಗಿ ಮಾಡಿದ್ದಾರೆ ಆ ರೀತಿಯಲ್ಲಿ ಒಂದೊಂದು ವರ್ಷದಲ್ಲಿ ಒಂದೊಂದು ಜಿಲ್ಲೆಗಳನ್ನು ಮಾಡಿ, ನಾಲ್ಕಾರು ವರ್ಷಗಳಲ್ಲಿ ಈ ಕೆಲಸವನ್ನು ಮಾಡಿ ಮುಗಿಸುತ್ತೇವೆ. ಈ ವಿಚಾರ ಸರಕಾರದ ಪರಿಗಣನೆಯಲ್ಲಿ ಇದೆ.

ಶ್ರೀ ವಿನಯಕುಮಾರ ಸೊರಕೆ —ಅಧ್ಯಕ್ಷರೆ, ವರದಿಯ ಪ್ರಕಾರ ಜಿಲ್ಲಾ ವಿಭಜನೆ ಮಾಡ ತಕ್ಕಂಥಾದ್ದರಲ್ಲಿ ಮಂಗಳೂರು ಮತ್ತು ಉಡುಪಿ ಎಂದು ಎರಡು ಜಿಲ್ಲೆಗಳನ್ನು ಮಾಡುತ್ತಾರೆ ಎಂದು ಹೇಳಿದ್ದಾರೆ. ನಮ್ಮ ಪುತ್ತೂರು ಕೂಡ ಸಬ್‌ಡಿವಿಜನ್ ಮಾಡಬೇಕೆಂದು ಸಾರ್ವಜನಿಕರ ಒಂದು ಬೇಡಿಕೆ ಇತ್ತು. ಮಂಗಳೂರು ಈಗ ಕಾರ್ಪೋರೇಶನ್ ಇದೆ. ಪುತ್ತೂರು, ಬಳ್ತಂಗಡಿ, ಸೂಳ್ಯ, ಇವುಗಳೆಲ್ಲ ಸೇರಿ ಒಂದು ಗ್ರಾಮಾಂತರ ಜಿಲ್ಲೆಯನ್ನು ಮಾಡಿದರು ಒಳ್ಳೆಯದೆಂ. ಪುತ್ತೂರು ವಿಭಾಗವನ್ನು ಸಬ್‌ಡಿವಿಜನ್ ಎಂದಾ ಮಾಡಬೇಕು. ತಮ್ಮ ರಿಪೋರ್ಟ್‌ನಲ್ಲಿ ಕಡಬವನ್ನು ಕೂಡ ತಾಲ್ಲೂಕು ಮಾಡ ಬೇಕೆಂದು ಹೇಳಿದ್ದಾರೆ. ಈ ಹಿಂದೆಯೂ ಕೂಡ ಉಡುಪಿಯನ್ನು ಜಿಲ್ಲೆಯಾಗಿ ಮಾಡುವ ಬಗ್ಗೆ ಮತ್ತು ಪುತ್ತೂರು ಸಬ್‌ಡಿವಿಜನ್ ಆಗಿ ಮಾಡುವ ಬಗ್ಗೆ ಅಸೆಂಬ್ಲಿಯಲ್ಲಿ ಪ್ರಸ್ತಾಪ ಮಾಡಿದ್ದೆವು. ಸಾರ್ವಜನಿಕರ ಮನವಿಯೂ ಕೂಡ ಇತ್ತು. ಆದುದರಿಂದ ನಮ್ಮ ವಿನಂತಿಯನ್ನು ಮನ್ನಣೆ ಮಾಡುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಜಿಲ್ಲೆಗಳ ಪುನರ್ ವಿಂಗಡಣೆ ಆದಾಗ ಸಬ್ ಡಿವಿಜನ್‌ಗಳೂ ಕೂಡ ಬದಲಾವಣೆ ಆಗುತ್ತವೆ, ಆಗ ಇದನ್ನು ಪರಿಶೀಲನೆ ಮಾಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಪುತ್ತೂರು ಕೂಡ ಸಬ್‌ಡಿವಿಜನ್ ಇದೆ. ಅದಕ್ಕೆ ಜಿಲ್ಲೆ ಎಂದು ಕನ್ವರ್ಟ್ ಮಾಡಿ, ಹಾಗೆಯೇ ಉಡುಪಿಯೂ ಒಂದು ಜಿಲ್ಲೆಯಾಗುತ್ತದೆ. ಮಂಗಳೂರು ಕಾರ್ಪೋರೇಶನ್ ಆಗುತ್ತದೆ. ಅಂದರೆ ಮಂಗಳೂರು, ಉಡುಪಿ, ಜಿಲ್ಲೆಗಳು ಎಂದು ಮಾಡುವ ಬದಲು, ಉಡುಪಿ, ಪುತ್ತೂರು ಗ್ರಾಮಾಂತರ ಜಿಲ್ಲೆ ಎಂದು ಮಾಡಿದರೆ ಒಳ್ಳೆಯದು ಎಂದು ಅಭಿಪ್ರಾಯ ಪಡುತ್ತಾರೆ.

Regarding release of arrears Hostel Grants

1284. SRI M. MALLIKARJUNA KHARGE (Gurumietkal).—Will the Minister for for Social Welfare be pleased to State.—

(a) Whether Government has promised last years to release the arrears of hostel grants of Dr. Ambedkar Degree College and Milind Junior College, Gulbarga.

(b) If so, the action taken by the Government to release the said grants ?

SRI G. BASAVANNAPPA (Minister for Social Welfare).—

(a) Yes.

(b) Arrears of Rs. 49,742 and Rs. 35,350 has been sanctioned on 10-5-1988 to the Principals of Milind Junior College, Gulbarga and Dr. Ambedkar Degree College, Gulbarga respectively.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸುಮಾರು ಎರಡು ವರ್ಷಗಳಿಂದ ನಾನು ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ ತಾವು ಇದೇ ರೀತಿಯಾದ ಉತ್ತರವನ್ನು ಹೇಳುತ್ತಾ ಬಂದಿದ್ದೀರಿ, ಜಿಲ್ಲಾ ಪರಿಷತ್ತಿನವರು ಹೇಳುತ್ತಾರೆ ನಮಗೆ ಇನ್ನೂ ಹಣ ಬಂದಿಲ್ಲ ಬಾಕಿ ಕೊಡತಕ್ಕಂಥಾದ್ದು ಇದೆ ಎಂದು. ನಾನು ಪ್ರಶ್ನೆ ಹಾಕಿದ ಮೇಲೆ ಅಂದರೆ ಎರಡು ದಿವಸದ ಹಿಂದೆ ೧೦-೫-೮೮ರಲ್ಲಿ ಹಣವನ್ನು ಬಿಡುಗಡೆ ಮಾಡಿದ್ದೀರಿ,